CW-07
PW-05

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಎಸ್.ಸಿ. ಸಂಖ್ಯೆ: 67/2024

ದಿ. 01-07-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-07
ಫ್ರಾಸಾ-05

| | |
|---|---|
| ಸಾಕ್ಷಿದಾರರ ಹೆಸರು | ಸಿದ್ದಪ್ಪ |
| ತಂದೆಯ ಹೆಸರು | ಮಲ್ಲೇಶ |
| ವಯಸ್ಸು | 40 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ರಬ್ಬನಕಲ್ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಚಾಸಾ-1, ರಿಂದ 6 8 ಮತ್ತು 9 ನನಗೆ ಗೊತ್ತು. ಆರೋಪಿತರು ಗೊತ್ತು. ಚಾಸಾ-1, 4 ರಿಂದ 6 ಹಾಗೂ ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದತೆ ಯಾವುದೇ ಘಟನೆಯನ್ನು ನೋಡಿಲ್ಲ ಮತ್ತು ನನಗೆ ಈ ಪ್ರಕರಣದ ಬಗ್ಗೆ ಗೊತ್ತಿರುವುದಿಲ್ಲ ಹಾಗೂ ಈ ಸಂಬಂಧ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರು ಕೋರಿದ್ದಾರೆ. ಅದರಂತೆ**

CW-07
PW-05

**<u>ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ.)</u>**

**<u>ಪಾಟೀ ಸವಾಲುಃ ಸಾರ್ವಜನಿಕ ಅಭಿಯೋಜಕರಿಂದ</u>**

2. ದಿಃ 10-12-2022 ರಂದು, ರಬ್ಬನಕಲ್ ಗ್ರಾಮದ ರಾಮಕ್ಕಮ್ಮ ದೇವಸ್ಥಾನದ ದುಡ್ಡನ್ನು ಲೆಕ್ಕ ಪತ್ರ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ನಾವು ಮತ್ತು ಆರೋಪಿತರು ದೇವಸ್ಥಾನದ ಹತ್ತಿರ ಸೇರಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮಳೆಯು ಬರುತ್ತಿರುವುದರಿಂದ ದೇವಸ್ಥಾನದ ಸುತ್ತಮುತ್ತಲೂ ಕೇಸರಾಗಿದ್ದರಿಂದ ನಾವು ಮತ್ತು ಆರೋಪಿತರು ಮತ್ತು ಊರಿನ ಜನರು ದೇವಸ್ಥಾನದ ದುಡ್ಡಿನ ಲೆಕ್ಕಪತ್ರ ಮಾಡಲು ದಿಃ 11-12-2022 ರಂದು ಪುನಃ 1 ನೇ ಆರೋಪಿಯ ಮನೆಯ ಅಂಗಳದಲ್ಲಿ ಸೇರಿದ್ದೆವು ಎಂದರೆ ಸರಿಯಲ್ಲ. ಬೆಳಿಗ್ಗೆ 10-30 ರ ಸಮಯದಲ್ಲಿ ಆರೋಪಿತರು ದೇವಸ್ಥಾನದ ಲೆಕ್ಕಪತ್ರ ಮಾಡಲು ನೀವೇಕೆ ಇಲ್ಲಿ ಬಂದಿರುತ್ತೀರಿ ಸೂಳೆಮಕ್ಕಳೇ ಎಂದು ಚಾಸಾ-1, 4 ರಿಂದ 6 ರವರೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದರೆ ಸರಿಯಲ್ಲ, ಆಗ 1 ನೇ ಆರೋಪಿ ಚಾಸಾ-1, 4 ರಿಂದ 6 ರವರಿಗೆ ಲಂಗಾ ಸೂಳೆಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದರೆ ಸರಿಯಲ್ಲ. 1 ನೇ ಆರೋಪಿ ಕಟ್ಟಿಗೆಯಿಂದ ಚಾಸಾ-1 ರವರಿಗೆ ಮೈ ಕೈಗೆ ಹೊಡೆದಿರುತ್ತಾರೆಂದರೆ ಸರಿಯಲ್ಲ. ಆರೋಪಿ 2 ರಿಂದ 4 ರವರು ಕೈಗಳಿಂದ ಚಾಸಾ-4 ಮತ್ತು ಚಾಸಾ-5 ರವರಿಗೆ ಹೊಡೆದಿರುತ್ತಾರೆಂದರೆ ಸರಿಯಲ್ಲ. ಬಿಡಿಸಲು ಬಂದ ಚಾಸಾ-6 ರವರಿಗೆ 2 ನೇ ಆರೋಪಿತನು ಚೀನಾಲಿ ಸೂಳೆ ಯಾಕೆ ಅಡ್ಡ ಬರುತ್ತೀಯಾ ಎಂದು ಅವಾಚ್ಯ

CW-07
PW-05

ಶಬ್ದಗಳಿಂದ ಬೈದು, ಮೈ ಕೈ ಮುಟ್ಟಿ ಸೀರೆ ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು, ಮಾನಕ್ಕೆ ಕುಂದು ಉಂಟು ಮಾಡಿರುತ್ತಾರೆಂದರೆ ಸರಿಯಲ್ಲ. ಆರೋಪಿತರೆಲ್ಲರೂ ನಮ್ಮನ್ನು ಜೀವಸಹಿತ ಬಿಡುವುದಿಲ್ಲ ಕೊಂದು ಹಾಕುತ್ತೇವೆಂದು ಜೀವದ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ. ನಾನು ಮತ್ತು ಚಾಸಾ-8 ರಿಂದ 10 ಈ ಪ್ರಕರಣದಲ್ಲಿನ ಜಗಳವನ್ನು ಪ್ರತ್ಯಕ್ಷವಾಗಿ ನೋಡಿ ಬಿಡಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ಅಭಿಯೋಜನೆಯ ಪರವಾಗಿ ನಿಪಿ-7 ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಆರ್.ಎಸ್. ವಕೀಲರಿಂದ ಆರೋಪಿತರ ಪರಃ</u>**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಮಾಲ ಎನ್.ಡಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.